ಅಪ್ಪ ಸಹ ಕೆಂಡಾಮಂಡಲವಾದರು. ಅವರು ಮೊದಲು ನೀಲ್‌ನನ್ನು ಪ್ರಶ್ನಿಸಿದರು, 'ನೀನು ಇವಳನ್ನು ಕರೆದಿದ್ದೆಯಾ ಅಥವಾ ಇವಳ ಮನೆಯಿಂದ ಇವಳನ್ನು ಹಾರಿಸಿಕೊಂಡು ತಂದೆಯಾ?'

ನೀಲ್ ಒಮ್ಮೆ ಸಕೀನಾಳನ್ನು ನೋಡಿ, ನಂತರ ಉಗುಳು ನುಂಗಿಕೊಂಡು ಬಹುಕಷ್ಟದಿಂದ ಹೇಳಿದ, 'ಇಲ್ಲ, ಇವಳೇ ಬಂದಳು.'

'ಅಸರಫ್ ಸಾಹೇಬ್ರೇ, ಈಗ ನಾನೇ ನಿಮ್ಮನ್ನು ಕೇಳಬೇಕಿದೆ, ನಿಮ್ಮ ಮಗಳು ನನ್ನ ಮಗನ ಕೋಣೆಗೆ ನಡುರಾತ್ರಿಯಲ್ಲಿ ಏಕೆ ಬಂದಳು? ನನ್ನ ಮಗ ನಿಮ್ಮ ಮನೆಗೆ ನುಗ್ಗಿಲ್ಲ. ನಿಮ್ಮ ಮಗಳು ಅವನ ಕೋಣೆಗೆ ತಾನೇ ಹೋಗಿದ್ದಾಳೆ. ಮೊದಲು ನಿಮ್ಮ ಮಗಳನ್ನು ಸಂಭಾಳಿಸಿಕೊಳ್ಳಿ' ಅಪ್ಪ ಗರ್ಜಿಸಿದರು.

ಸಕೀನಾಳ ಬಿಕ್ಕಳಿಕೆ ಹೆಚ್ಚಿತು. ಘೋರ ಅವಮಾನವಾಗುತ್ತಿತ್ತು. ನಾನು ಮತ್ತು ನೀಲ್, ಅಪ್ಪನನ್ನು ತಡೆದೆವು, ನೀವು ಸಕೀನಾ ಬಗ್ಗೆ ಹೀಗೆಲ್ಲಾ ಸುಳ್ಳು ಆರೋಪ ಹೊರಿಸಬೇಡಿ ಎಂದೆವು.

'ಇವಳಿಗೆ ನಾವು ಪಾಠ ಕಲಿಸ್ತೀವಿ... ನಡಿ ಹುಡುಗಿ...' ಮೊಪ್ಪಿಲ್ಲಾ ದಂಪತಿ ತಮ್ಮ ಮಗಳ ಕೈಯನ್ನು ಹಿಡಿದು ಸಕೀನಾಳನ್ನು ಮನೆಯೊಳಗೆ ಎಳೆದುಕೊಂಡು ಹೋದರು.

ಮರುದಿನ ಬೆಳಿಗ್ಗೆ, ನಮ್ಮ ಮನೆಗಳ ಗೋಡೆಯನ್ನು ಸಕೀನಾಳ ಅಬ್ಬಾಜಾನ್ ಎತ್ತರಸಿ, ಅದರ ಮೇಲೆ ಗಾಜಿನ ತುಂಡುಗಳನ್ನು ನೆಡಿಸಿದರು; ಈ ಮೊದಲು ನಾವು ಆ ಗೋಡೆಯನ್ನು ದಾಟಿ ಸುಲಭವಾಗಿ ಇಬ್ಬರ ಮನೆಗೂ ಹೋಗಬಹುದಿತ್ತು. ಉಳಿದ ಅಕ್ಕಪಕ್ಕದ ಮನೆಯವರ ದೃಷ್ಟಿ ಆ ಗೋಡೆಯ ಮೇಲೆ ಬಿತ್ತು. ಅವರು ನಮ್ಮನ್ನು, 'ಮೊಪ್ಪಿಲ್ಲಾ ಸಾಹೇಬರು ನಿಮ್ಮ ಮನೆಯ ಗೋಡೆಯನ್ನಷ್ಟೇ ಏಕೆ ಎತ್ತಿರಿಸಿದರು? ಅಲ್ಲೇಕೆ ಗಾಜನ್ನು ಹಾಕಿಸಿದರು?' ಎಂದು ಪ್ರಶ್ನಿಸಿದರು.

ನಾನು ಮತ್ತು ಅಪ್ಪ ಅವರಿಗೆ ಏನೆಂದು ಉತ್ತರಿಸುವುದು? ಕಡೆಗೆ, ಅವರನ್ನೇ ಕೇಳಿ ಎನ್ನುತ್ತಿದ್ದೆವು...

ನಮ್ಮ ಸಂಬಂಧದಲ್ಲಿ ಆಳವಾದ ಬಿರುಕು ಬಿದ್ದಿತ್ತು, ಮಾತುಕತೆ ನಿಂತುಹೋಗಿತ್ತು. ಆದರೂ ಸಕೀನಾ ಮತ್ತು ನೀಲ್ ಪರಸ್ಪರ ಭೇಟಿಯಾಗುವುದನ್ನು ನಿಲ್ಲಿಸಲಿಲ್ಲ. ನಿಮ್ಮ ಮಗಳು ಈಗಲೂ ಆ ಕ್ರೈಸ್ತ ಹುಡುಗನೊಂದಿಗೆ

